## ಸಂಪಾದಕೀಯ

# ಅಹಂಕಾರದ ಪರಿಪಕ್ವತೆ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ಹಲವು ಮುಖ ವ್ಯಕ್ತಿ

ಪ್ರತಿಯೊಬ್ಬನಿಗೂ ಒಂದೊಂದು ಬಗೆಯ ವ್ಯಕ್ತಿತ್ವವಿರುವುದೆಂದು ನಾವು ಸಾಮಾನ್ಯವಾಗಿ ಭಾವಿಸುತ್ತೇವೆ. ಇದು ಆಪಾತತಃ ನಿಜವಾದರೂ ಪ್ರತಿಯೊಬ್ಬರೂ ತಮ್ಮ ವ್ಯಕ್ತಿತ್ವವನ್ನು ನಿಷ್ಪಕ್ಷಪಾತವಾಗಿ ವಿಶ್ಲೇಷಿಸಿದಾಗ ಕಂಡುಬರುವುದೇನೆಂದರೆ ತಮ್ಮಲ್ಲಿ ಹಲವಾರು ವ್ಯಕ್ತಿತ್ವಗಳಿವೆ ಎಂಬುದು. ನಾವು ಏನೋ ಮಾಡಬೇಕೆಂದು ಈಗ ನಿರ್ಧರಿಸುತ್ತೇವೆ, ಮತ್ತೆ ಸ್ವಲ್ಪ ಹೊತ್ತಿನನಂತರ ಅದನ್ನು ಬದಲಾಯಿಸುತ್ತೇವೆ. ನಾವು ನಿರ್ಧರಿಸಿದಾಗ ಒಂದು ರೀತಿಯ ವ್ಯಕ್ತಿಯಾಗಿದ್ದೆವು, ಬದಲಾಯಿಸುವಾಗ ಇನ್ನೊಂದು ಬಗೆಯ ವ್ಯಕ್ತಿಯಾಗಿರುತ್ತೇವೆ. ಒಂದು ಸಂದರ್ಭದಲ್ಲಿ ತೀವ್ರ ವೈರಾಗ್ಯದಿಂದ ಸಂನ್ಯಾಸ ಸ್ವೀಕರಿಸಬೇಕೆಂದು ನಿರ್ಧರಿಸಿದ ಕೆಲವರು ಸ್ವಲ್ಪ ಕಾಲದ ನಂತರ ಮದುವೆಯಾಗಿ ಬಿಡುತ್ತಾರೆ. ಕೆಲವರು ಮದುವೆಯಾದ ನಂತರ ಅಯ್ಯೊ, ಸಂನ್ಯಾಸಿಯಾಗಬೇಕಿತ್ತು ಎಂದು ಭಾವಿಸುತ್ತಾರೆ. ಇಲ್ಲಿ ಅಹಂಪ್ರತ್ಯಯವು ತನ್ನ ನೆಲೆಯನ್ನು ಬದಲಾಯಿಸುವುದನ್ನು ಕಾಣುತ್ತೇವೆ—ಅದು ಒಮ್ಮೊಮ್ಮೆ ಒಂದೊಂದು ನಿರ್ಧಾರದೊಡನೆ, ಒಂದೊಂದು ಭಾವದೊಡನೆ ತನ್ನನ್ನು ಒಂದಾಗಿಸಿಕೊಳ್ಳುತ್ತದೆ.

ಅನೇಕರು ಒಂದೊಂದು ಸನ್ನಿವೇಶಗಳಲ್ಲಿ ಒಂದೊಂದು ಬಗೆಯ ವ್ಯಕ್ತಿಗಳಾಗಿರುತ್ತಾರೆ. ಮನೆಯಲ್ಲಿ ದಬ್ಬಾಳಿಕೆ ನಡೆಸುತ್ತಾರೆ, ಆಫೀಸಿನಲ್ಲಿ ಗುಲಾಮರಂತಿರುತ್ತಾರೆ, ದೇವಾಲಯಕ್ಕೆ ಹೋದಾಗ ದೊಡ್ಡ ಧಾರ್ಮಿಕರಾಗುತ್ತಾರೆ, ವ್ಯಾಪಾರ ಮಾಡುವಾಗ ವಂಚಕರಾಗಿರುತ್ತಾರೆ. ಇಲ್ಲಿ ಅಹಂ ಪ್ರತ್ಯಯವು ಒಮ್ಮೊಮ್ಮೆ ಒಂದೊಂದು ಸ್ಥಾನದೊಡನೆ ಒಂದಾಗಿರುವುದನ್ನು ನೋಡುತ್ತೇವೆ. ವ್ಯಕ್ತಿಯು ಭಾವ, ಸ್ಥಾನ ಮುಂತಾದುವುಗಳನ್ನು ಮೀರಿ ನಿಂತಾಗಲೇ ಅವನು ಒಂದು ಸ್ಥಿರವಾದ ನಿರ್ದಿಷ್ಟವಾದ ವ್ಯಕ್ತಿತ್ವವನ್ನು ಪಡೆಯುತ್ತಾನೆ. ಇಲ್ಲದಿದ್ದರೆ ಬೇರೆ ಬೇರೆ ಸ್ಥಾನ, ಭಾವ, ಅವಸ್ಥೆಗಳಿಗನುಗುಣವಾಗಿ, ಏಕಪಾತ್ರಾಭಿನಯದಂತೆ, ಅವನ ವ್ಯಕ್ತಿತ್ವ ಬದಲಾಗುತ್ತಿರುತ್ತದೆ.

ಇಂದಿನ ಸಂಕೀರ್ಣವಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಹಲವು ಪ್ರಭಾವಗಳ ಒತ್ತಡದಿಂದಾಗಿ ಮತ್ತು ಹಲವು ಆದರ್ಶಗಳ ಸೆಳೆತದಿಂದಾಗಿ ವ್ಯಕ್ತಿಯು ಕ್ಷಣಕ್ಷಣಕ್ಕೂ ಬದಲಾಗುವ ಸಾಧ್ಯತೆ ಜಾಸ್ತಿಯಾಗಿದೆ—ಅಂದರೆ ಅಹಂಪ್ರತ್ಯಯವು ತನ್ನ ನೆಲೆಯನ್ನು ಬದಲಾಯಿಸುವುದು ಅಧಿಕವಾಗಿದೆ. ಇದು ಮಾನಸಿಕ ಸಂಘರ್ಷವನ್ನು ಉಂಟುಮಾಡುತ್ತದೆ ಮತ್ತು ಈ ಸಂಘರ್ಷವು ತೀವ್ರವಾದಾಗ ಅನೇಕ ಮಾನಸಿಕ ರೋಗಗಳು ತಲೆದೋರುತ್ತವೆ. ವ್ಯಕ್ತಿಯು ತನ್ನ ಅಹಂ ಪ್ರತ್ಯಯದ ಸ್ಥಿರವಾದ ನೆಲೆಯನ್ನು ಕಂಡುಕೊಳ್ಳುವುದು ಅತ್ಯಂತ ಆವಶ್ಯಕ. ಯಾವುದು ಆ ಸ್ಥಿರವಾದ ನೆಲೆ?

### ಆಧ್ಯಾತ್ಮಿಕ ಹಿನ್ನೆಲೆ

ನಮ್ಮ ವ್ಯಕ್ತಿತ್ವದ ಹಿನ್ನೆಲೆ ಆಧ್ಯಾತ್ಮಿಕವಾದುದೆಂದು ನಮ್ಮ ಶಾಸ್ತ್ರಗಳು ಹೇಳುತ್ತವೆ—ಅಲೆಗಳಿಗೆ ನೀರು ಹಿನ್ನೆಲೆಯಾಗಿರುವಂತೆ. ಈ ಆಧ್ಯಾತ್ಮಿಕ ಸತ್ಯದಲ್ಲಿ ನಮ್ಮ ನೆಲೆಯನ್ನು ನಾವು ಕಂಡುಕೊಳ್ಳಬೇಕು. ನಾಟಕದ ಪಾತ್ರಧಾರಿಗಳು ಒಂದೊಂದು ನಾಟಕದಲ್ಲಿ ಒಂದೊಂದು ಪಾತ್ರವನ್ನು ವಹಿಸುತ್ತಾರೆ. ಆದರೆ ಅವರು ಆ ಪಾತ್ರಗಳಿಗೆ ಅನುಗುಣವಾಗಿ ಬದಲಾಗುವುದಿಲ್ಲ, ಅದು ಕೇವಲ ತಾತ್ಕಾಲಿಕ ಎಂಬುದು ಅವರಿಗೆ ತಿಳಿದಿರುತ್ತದೆ. ಆ ಪಾತ್ರ ಮುಗಿದ ಕೂಡಲೆ ಅವರು ತಮ್ಮ ಮೂಲಸ್ವಭಾವಕ್ಕೆ ಅನುಗುಣವಾಗಿ ವರ್ತಿಸುತ್ತಾರೆ. ಹಾಗೆಯೇ ನಮ್ಮೆಲ್ಲರ ಮೂಲಸ್ವರೂಪ ಆಧ್ಯಾತ್ಮಿಕ. ಅದರಲ್ಲಿ ನಾವು ನೆಲೆನಿಂತು ನಮ್ಮ ಜೀವನದ ವಿವಿಧ ಪಾತ್ರಗಳನ್ನು ನಾವು ನಿರ್ವಹಿಸಬೇಕು. ಆಗ ನಮ್ಮ ವ್ಯಕ್ತಿತ್ವಕ್ಕೆ ಒಂದು ನಿಜವಾದ ಸ್ಥಿರತೆ ಬರುತ್ತದೆ. ಈ ರೀತಿ ಆಧ್ಯಾತ್ಮಿಕ ಹಿನ್ನೆಲೆಯೊಂದಿಗೆ ಒಂದಾಗಿ ಸ್ಥಿರವೂ ಶಾಶ್ವತವೂ ಆದ ವ್ಯಕ್ತಿತ್ವವನ್ನು ಪಡೆಯುವುದೇ ಜೀವನದ ನಿಜವಾದ ಗುರಿ.

ಸಾಮಾನ್ಯ ವ್ಯಕ್ತಿಯ ಸ್ಥಿತಿಯನ್ನು ಕುರಿತು ಜಿ.ಐ.ಗುರ್‌ಜೀಫ್ ಹೀಗೆ ಅಭಿಪ್ರಾಯ ಪಡುತ್ತಾರೆ: "ಮಾನವನು ಒಬ್ಬನೇ ಆಗಿರುತ್ತಾನೆ ಮತ್ತು ಯಾವಾಗಲೂ ಒಂದೇ ರೀತಿಯಾಗಿರುತ್ತಾನೆ ಎಂದು ಭಾವಿಸುವುದು ದೊಡ್ಡ ತಪ್ಪು. ಮಾನವನು ಬಹಳ ಕಾಲ ಒಂದೇ ರೀತಿಯಾಗಿರುವುದೇ ಇಲ್ಲ. ಅವನು ನಿರಂತರ ಬದಲಾಗುತ್ತಿರುತ್ತಾನೆ... ಒಂದು ದೇಶವಿದೆ, ಅಲ್ಲಿ ಪ್ರತಿಯೊಬ್ಬನೂ ಐದು ನಿಮಿಷ ರಾಜನಾಗಬಹುದು ಮತ್ತು ಆ ಐದು ನಿಮಿಷದಲ್ಲಿ ಅವನು ಇಡೀ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ತನಗೆ ತೋಚಿದಂತೆ ಮಾಡಬಹುದು—ಎಂದು ಊಹಿಸಿ. ಇದು ನಮ್ಮ ಜೀವನದ ಸ್ಥಿತಿ." (*In Search of Miraculous*, ಪು. 53-54). ದೇಹೇಂದ್ರಿಯ ಮನೋವೃತ್ತಿಗಳೆಲ್ಲವೂ ಒಂದಾದ ಮೇಲೆ ಒಂದರಂತೆ ನಮ್ಮನ್ನು ಆಳುತ್ತಿರುತ್ತವೆ. ಈ ಆಳುಗಳ ಆಳ್ವಿಕೆಯನ್ನು ತಪ್ಪಿಸಿ ನಾವೇ ಅವುಗಳನ್ನು ಆಳುವಂತಾಗಬೇಕು. ಇದಕ್ಕೆ ನಮ್ಮ ಅಹಂಪ್ರತ್ಯಯವನ್ನು ಆಧ್ಯಾತ್ಮಿಕ ನೆಲೆಯ ಮೇಲೆ ಸ್ಥಿರಗೊಳಿಸಿ ಬಲಗೊಳಿಸಬೇಕು. ಆಗ ವ್ಯಕ್ತಿಗೆ ತನ್ನತನ ಬರುತ್ತದೆ.

### ಪೂರ್ಣಪ್ರಜ್ಞೆಯೊಂದಿಗೆ ಐಕ್ಯ

ಮುಂದೆ ಈ ತನ್ನತನವನ್ನೂ ಮೀರಿಹೋಗಿ, ತನ್ನ ಅಹಂ ಪ್ರತ್ಯಯದ ಪರಿಧಿಯನ್ನೂ ಮೀರಿಹೋಗಿ ಇಡೀ ಜಗತ್ತಿನೊಡನೆ ಒಂದಾಗುವುದನ್ನು ಕಲಿಯಬೇಕು, ಮತ್ತು ತನ್ನನ್ನು ಇತರರಲ್ಲಿ ಕಾಣುವಂತಾಗಬೇಕು. ಪ್ರಸಿದ್ಧ ಚಿಂತಕರಾದ ಹೆಚ್.ಎ. ಓವರ್‌ಸ್ಟ್ರೀಟ್ (*Overstreet*) ಹೇಳುತ್ತಾರೆ : "ತನ್ನನ್ನು ಇತರರಲ್ಲಿ ಕಾಣುವ ಮತ್ತು

ಇತರರು ತನಗೇನು ಮಾಡಬೇಕೆಂದು ಬಯಸುತ್ತಾನೊ ಅದನ್ನು ಇತರರಿಗೆ ಮಾಡುವ ಸಾಮರ್ಥ್ಯವನ್ನೂ ಇಚ್ಛೆಯನ್ನೂ ಪಡೆಯುವವರೆಗೆ ಒಬ್ಬ ವ್ಯಕ್ತಿಯನ್ನು ಪ್ರೌಢ ಎಂದು ಹೇಳಲಾಗುವುದಿಲ್ಲ." ಪ್ರಸಿದ್ಧ ಸಂಸ್ಕೃತ ಶ್ಲೋಕವೊಂದನ್ನು ನಾವಿಲ್ಲಿ ನೆನೆಸಿಕೊಳ್ಳಬಹುದು.

**ಅಹಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ |**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ||**

"ಇವನು ನನ್ನವನು, ಇವನು ಬೇರೆಯವನು ಎಂಬುದು ಕ್ಷುದ್ರ ಮನಸ್ಸಿನವರ ಭಾವನೆ. ಉದಾರ ಚರಿತ್ರೆಯುಳ್ಳವರಿಗೆ ಇಡೀ ವಿಶ್ವವೇ ಕುಟುಂಬವಾಗುತ್ತದೆ."

ಶ್ರೀಮಾತೆ ಶಾರದಾದೇವಿಯವರ ಈ ಕೆಳಗಿನ ಮಾತು ಇಲ್ಲಿ ಅತ್ಯಂತ ಪ್ರಸ್ತುತ : "ಮಗು, ಜಗತ್ತಿನಲ್ಲಿರುವ ಎಲ್ಲರನ್ನೂ ನಿನ್ನವರನ್ನಾಗಿಸುವುದನ್ನು ಕಲಿ. ನಿನಗೆ ಯಾರೂ ಪರರಲ್ಲ." ಈ ರೀತಿ ಎಲ್ಲರೊಡನೆ ಒಂದಾಗುವುದನ್ನು ಕಲಿತಾಗ ಶ್ರೀಮಾತೆ ಶಾರದಾದೇವಿಯವರಂತೆ ಎಂತೆಂಥ ಕಷ್ಟಕೋಟಲೆಗಳ ನಡುವೆಯೂ ಸುಖಶಾಂತಿಯಿಂದ ಇರಬಹುದು. ಈಶಾವಾಸ್ಯೋಪನಿಷತ್ ಹೇಳುವಂತೆ :

ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ |
ತತ್ರ ಕೋ ಮೋಹಃ ಕಶ್ಶೋಕ ಏಕತ್ವಮನುಪಶ್ಯತಃ || ೭ ||

"ಯಾವಾಗ ತಿಳಿದವನಿಗೆ ಎಲ್ಲ ಪ್ರಾಣಿಗಳೂ ತನ್ನ ಆತ್ಮವೇ ಆಗುವುವೊ, ಏಕತ್ವವನ್ನು ನೋಡುವ ಅಂತಹ ವ್ಯಕ್ತಿಗೆ ಶೋಕವೆಲ್ಲಿ? ಮೋಹವೆಲ್ಲಿ?"

ತತ್ತ್ವಮಸಿ

ಜಗತ್ತಿನೊಡನೆ ನಮ್ಮ ಸಂಬಂಧ "ನಾನು ಮತ್ತು ಅದು" ಎಂಬುದಾಗಿರದೆ, "ನಾನು ಮತ್ತು ನೀನು" ಎಂಬುದಾಗಿರಬೇಕು ಎಂದು ಯಹೂದ್ಯ ತತ್ತ್ವಜ್ಞಾನಿ ಮಾರ್ಟಿನ್ ಬ್ಯೂಬರ್ ಅಭಿಪ್ರಾಯಪಡುತ್ತಾರೆ. ಅಂದರೆ ಹೊರಜಗತ್ತನ್ನು ಮತ್ತು ವ್ಯಕ್ತಿಗಳನ್ನು ಕೇವಲ ವಸ್ತುಗಳಾಗಿ ಕಾಣದೆ ಚೇತನಾತ್ಮಕವಾಗಿ ಕಾಣಬೇಕು. ಅವರು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ. ಒಂದು ಮರದ ವಿವಿಧ ಭಾಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೋಡಿ ಅಧ್ಯಯನ ಮಾಡುವಾಗ ಆ ಮರ ನಮಗೆ "ಅದು". ಆದರೆ ಆ ಮರವನ್ನು ಅದರ ಎಲ್ಲ ಭಾಗಗಳಿಂದ ಪ್ರತ್ಯೇಕವಾಗಿ ನೋಡಿದಾಗ ಅದು "ನೀನು" (ಚೇತನಾತ್ಮಕ)ಆಗುತ್ತದೆ. ಆಗ ಅದರೊಡನೆ ನಮ್ಮ ಸಂಬಂಧ ಹೆಚ್ಚು ನಿಕಟವಾಗುತ್ತದೆ. ಸಂಗೀತವು ಕೇವಲ ರಾಗ, ತಾಳ, ಶ್ರುತಿಗಳ ಒಂದು ಸಂಮಿಲನವಲ್ಲ, ಅದು ಅವುಗಳನ್ನು ಮೀರಿದ ಏನೋ ಒಂದು. ಅದೇ ನಮಗೆ ಆನಂದವನ್ನು ಕೊಡುವಂತಹುದು. ಕೇವಲ ರಾಗ, ತಾಳ, ಶ್ರುತಿಗಳು ಕೂಡಿದಾಗ ಸಂಗೀತವಾಗುವುದಿಲ್ಲ—ಅವುಗಳ ಮೂಲಕ ಅದು ವ್ಯಕ್ತವಾಗುತ್ತದೆ ಅಷ್ಟೆ. ಹಾಗೆಯೇ ಈ ಜಗತ್ತೂ ಬಿಡಿ ಬಿಡಿ ಭಾಗವಾಗಿ ಕಾಣುವ ಕೇವಲ ವಸ್ತು ಮಾತ್ರವಲ್ಲ. ನಾವು ಅದನ್ನು ವಸ್ತು ಮಾತ್ರವಾಗಿ ನೋಡಿದಾಗ ಅದರೊಡನೆ ನಮ್ಮ ಸಂಬಂಧ "ನಾನು-ಅದು" ಆಗಿರುತ್ತದೆ, ಆಗ "ಅದು" ನನ್ನ ಬಳಕೆಯ ವಸ್ತುವಾಗುತ್ತದೆ. ಆದರೆ "ಅದು"ರ ಒಳಹೊಕ್ಕು ನೋಡಿದಾಗ "ನೀನು" ಎದುರಾಗುತ್ತದೆ. ಈ "ನಾನು-ನೀನು" ಹಂತದಲ್ಲಿ ಏಕತೆ ಸಾಧ್ಯ. ಈ ಹಂತದಲ್ಲಿ "ನಾನು" ಮತ್ತು "ನೀನು"ಗಳನ್ನು ಆವರಿಸಿರುವ ಉಪಾಧಿಗಳೆಲ್ಲ ಹೋಗಿ "ತತ್ತ್ವಮಸಿ" (ಅದು ನೀನೇ ಆಗಿದ್ದೀಯೆ) ಎಂಬ ಅನುಭವ ಉಂಟಾಗುತ್ತದೆ. ಈ ಏಕತೆಯ ಅನುಭವವೇ ವೇದಾಂತದ ಆತ್ಯಂತಿಕ ಗುರಿ.

ವ್ಯಕ್ತಿಯ ಅಹಂಪ್ರಜ್ಞೆಯು ತನ್ನ ಆಧ್ಯಾತ್ಮಿಕ ಹಿನ್ನೆಲೆಯನ್ನು ಕಳೆದುಕೊಂಡು ದೇಹೇಂದ್ರಿಯಾದಿ ಉಪಾಧಿಗಳೊಂದಿಗೆ ತನ್ನನ್ನು ಒಂದಾಗಿಸಿಕೊಂಡಾಗ ಅವನಿಗೆ ಎಲ್ಲರೂ ಪರಕೀಯರಾಗುವುದು ಮಾತ್ರವಲ್ಲದೆ, ತನಗೆ ತಾನೇ ಪರಕೀಯನಾಗುತ್ತಾನೆ. ಇದು ಅವನಲ್ಲಿ ಅಸಹನೀಯವಾದ ಒಂಟಿತನದ ಭಾವವನ್ನು ಉಂಟುಮಾಡುತ್ತದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಎರಿಕ್ ಫ್ರೊಮ್ (Eric Fromm) ಹೇಳುತ್ತಾರೆ : "ಯಾವುದೇ ವ್ಯಕ್ತಿಯಾಗಲಿ ನನಗಿಂತ ಮೂಲಭೂತವಾಗಿ ಬೇರೆ ಎಂಬ ಅನುಭವ ನನಗುಂಟಾಗುತ್ತಿರುವವರೆಗೂ, ಅವನು ನನಗೆ ಪರಕೀಯನಾಗಿರುವವರೆಗೂ, ನನಗೆ ನಾನೇ ಪರಕೀಯನಾಗಿರುತ್ತೇನೆ," (*Beyond the Chains of Illusion*, ಪು.162). ಆದ್ದರಿಂದ ವ್ಯಕ್ತಿ ತನ್ನ ಉಪಾಧಿಬದ್ಧ ವ್ಯಕ್ತಿತ್ವವನ್ನು ಮೀರಿಹೋಗುವುದು ಆವಶ್ಯಕ.

ಮರವಾಗಿ ಬೆಳೆಯಬೇಕಾದ ಗಿಡವನ್ನು ಕುಂಡದಲ್ಲಿ ಹಾಕಿ ಬೆಳೆಸುತ್ತಾರೆ. ಅದು ಮರದಂತೆಯೇ ಕಾಣುತ್ತಿರುತ್ತದೆ, ಮರದ ಎಲ್ಲ ಲಕ್ಷಣಗಳನ್ನೂ ಹೊಂದಿರುತ್ತದೆ. ಆದರೆ ಮರದಂತೆ ಅದು ಬೆಳೆದಿರುವುದಿಲ್ಲ. ಅದೇ ಗಿಡವನ್ನು ಕುಂಡದಿಂದ ಹೊರತೆಗೆದು ಭೂಮಿಯಲ್ಲಿ ನೆಟ್ಟಾಗ ತನ್ನ ಬೇರುಗಳನ್ನು ವಿಶಾಲವಾಗಿ ಹರಡಿಕೊಂಡು, ರಂಬೆಕೊಂಬೆಗಳನ್ನು ವಿಸ್ತಾರವಾಗಿ ಬೆಳೆಸುತ್ತ, ಎಲ್ಲ ಕಡೆಯಿಂದಲೂ ಆಹಾರವನ್ನು ಹೀರಿಕೊಳ್ಳುತ್ತ ಒಂದು ಬೃಹತ್ ವೃಕ್ಷವಾಗಿ ಬೆಳೆಯುತ್ತದೆ, ಮತ್ತು ಅನೇಕರಿಗೆ ಆಶ್ರಯವನ್ನು ನೀಡುತ್ತದೆ. ಹಾಗೆಯೇ ದೇಹೇಂದ್ರಿಯ ಮನಸ್ಸುಗಳೆಂಬ ಕುಂಡದಲ್ಲಿ ನಾವಿದ್ದರೆ ನಮ್ಮ ಬೆಳವಣಿಗೆ ಕುಂಠಿತವಾಗುತ್ತದೆ. ಅದನ್ನು ಮೀರಿ ನಮ್ಮ ವ್ಯಕ್ತಿತ್ವ ವಿಸ್ತಾರವಾದಷ್ಟೂ ನಾವು ಆಧ್ಯಾತ್ಮಿಕವಾಗಿ ಬೆಳೆಯುತ್ತ ಹೋಗುತ್ತೇವೆ. ಅಹಂಪ್ರತ್ಯಯವು ಪ್ರೌಢತ್ವವನ್ನು ಪಡೆಯುವುದು ಈ ರೀತಿ. ಅದು ಪ್ರೌಢತ್ವವನ್ನು ಪಡೆಯದಿದ್ದಾಗ, ಕುಂಡದಲ್ಲಿರುವ ಗಿಡವು ತನ್ನ ಉಳಿವಿಗೆ ಇತರರನ್ನು ಅವಲಂಬಿಸಿಕೊಂಡಿರುವಂತೆ, ಯಾವಾಗಲೂ ನಾವು ಪರಾವಲಂಬಿಗಳಾಗಿ ಬಾಳುತ್ತೇವೆ.

ಶರಣಾಗತಿ

ಶ್ರೀರಾಮಕೃಷ್ಣರು ಅಹಂಕಾರವನ್ನು ಪಕ್ವ ಮತ್ತು ಅಪಕ್ವ ಎಂದು ವಿಭಾಗಿಸುತ್ತಾರೆ. ಅವರು ಹೇಳುತ್ತಾರೆ: "ದಾಸ ಅಹಂ, ಜ್ಞಾನಿ ಅಹಂ ಅಥವಾ ಭಕ್ತ ಅಹಂ ಇವನ್ನು ಪಕ್ವ ಅಹಂ ಎಂದು ಕರೆಯಬಹುದು. ಇದು ಅಪಕ್ವ ಅಹಂನಿಂದ ಬೇರೆಯಾದುದು. ಅಪಕ್ವ ಅಹಂ, 'ನಾನು ಕರ್ತೃ', 'ನಾನು ಧನಿಕನ ಪುತ್ರ', 'ನಾನು ಪಂಡಿತ', 'ನಾನು ಶ್ರೀಮಂತ', 'ನನ್ನನ್ನು ಕಡೆಗಣಿಸಲು ಎಷ್ಟು ಧೈರ್ಯ ಇವನಿಗೆ'—ಎಂದೆಲ್ಲ ಭಾವಿಸುತ್ತದೆ." ಇಲ್ಲಿ ಶ್ರೀರಾಮಕೃಷ್ಣರು ಸೂಚಿಸುವುದೇನೆಂದರೆ ದೇವರೊಡನೆ ಸಂಬಂಧವನ್ನು ಪಡೆದ ಅಹಂಕಾರವು

ಪಕ್ವ. ಅಂದರೆ ಪೂರ್ಣದೊಂದಿಗೆ ಸಂಬಂಧಿಸಿದ ಅಹಂಕಾರವು ಪಕ್ವವಾಗುತ್ತದೆ. ಅದು ಪ್ರಾಪಂಚಿಕ ವಿಷಯಗಳೊಡನೆ ಸಂಬಂಧಿಸಿದ್ದರೆ ಅಪಕ್ವವಾಗಿರುತ್ತದೆ. ಮರದಿಂದ ಬೇರೆಯಾದ ಕೊಂಬೆಯು ಕ್ರಮೇಣ ಒಣಗಿಹೋಗುವಂತೆ ಪೂರ್ಣದಿಂದ ಪ್ರತ್ಯೇಕವಾದ ಅಹಂಕಾರವೂ ರೋಗಗ್ರಸ್ತವಾಗುತ್ತದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಕಾರ್ಲ್ ಯುಂಗ್ (*Carl Jung*) ಅವರ ಹೇಳಿಕೆಯೂ ಇದನ್ನೇ ಸಮರ್ಥಿಸುತ್ತದೆ : "ಅಹಂಕಾರವು ಪೂರ್ಣದಿಂದ ಪ್ರತ್ಯೇಕವಾಗಿರುವುದರಿಂದ, ಮಾನವ ಕೋಟಿಯೊಂದಿಗೆ ಮತ್ತು ಚೇತನದೊಡನೆ ಸಂಪರ್ಕವನ್ನು ಕಳೆದುಕೊಂಡಿರುವುದರಿಂದ ರೋಗಗ್ರಸ್ತವಾಗಿದೆ" (*Modern Man in Search of a Soul*, ಪು. 141).

> ನಮ್ಮನ್ನು ನಾವು ಅರ್ಪಿಸಿಕೊಳ್ಳುವ ಮೊದಲು ನಮ್ಮನ್ನು ನಾವು ಪಡೆಯಬೇಕು. ಏಕೆಂದರೆ ತನ್ನಲ್ಲಿಲ್ಲದೆ ಇರುವುದನ್ನು ಯಾರೂ ತ್ಯಜಿಸಲಾರರು.
>
> —ಥಾಮಸ್ ಮೆರ್ಟನ್ (*Thomas Merton*)

ಅಹಂಪ್ರತ್ಯಯವನ್ನು ಪೂರ್ಣದೊಂದಿಗೆ ಒಂದಾಗಿಸುವುದೇ ಶರಣಾಗತಿ. ಪೂರ್ಣಶರಣಾಗತಿಯ ಭಾವ ಬರುವುದು ನಮ್ಮ ಅಹಂಪ್ರತ್ಯಯವು ಪರಿಪಕ್ವತೆಯನ್ನು ಪಡೆದಾಗ. ನಾವು ಪರಿಪಕ್ವವಾದ ಹಣ್ಣನ್ನೇ ದೇವರಿಗೆ ಅರ್ಪಿಸುತ್ತೇವೆ, ಹುಳಿಯಾಗಿರುವುದನ್ನಲ್ಲ. ಹಣ್ಣು ಚೆನ್ನಾಗಿ ಕಳಿತಾಗ ಅದು ಸಿಹಿಯಾಗುತ್ತದೆ. ಹಾಗೆಯೇ ಪಕ್ವವಾದ ಅಹಂ ಉಳ್ಳವರು ತುಂಬ ಮಧುರ ಸ್ವಭಾವದವರಾಗಿರುತ್ತಾರೆ. ತುಂಬ ದುರಹಂಕಾರದ ವ್ಯಕ್ತಿಯ ಸಂಬಂಧವಾಗಿ "ಅವನಿಗೆ ಹುಳಿ ಜಾಸ್ತಿ" ಎನ್ನುತ್ತೇವೆ. ಅಂದರೆ ಅವನ ಅಹಂ ಇನ್ನೂ ಪಕ್ವವಾಗಿಲ್ಲ ಎಂದರ್ಥ. ಈ ಅಪಕ್ವ ಅಹಂಕಾರದ ವಿವಿಧ ಮುಖಗಳನ್ನು ನಾವಾಗಲೇ ನೋಡಿರುವೆವು.

## ಮೂರು ಬಗೆಯ ಅಹಂ

ಟ್ರಾನ್ಸಾಕ್ಷನಲ್ ಅನಾಲಿಸಿಸ್ (*Transactional Analysis*) ಎಂಬ ಮನಶ್ಶಾಸ್ತ್ರದ ವಿಧಾನದಲ್ಲಿ ಅಹಂ ಪ್ರತ್ಯಯವನ್ನು ಮೂರು ಅವಸ್ಥೆಗಳಾಗಿ ವಿಭಾಗಿಸಲಾಗಿದೆ: ಪಿತೃ ಅಹಂ (*Parental ego*), ವಯಸ್ಕ ಅಹಂ (*Adult ego*) ಮತ್ತು ಶಿಶು ಅಹಂ (*Child ego*). ಈ ಮೂರು ಅವಸ್ಥೆಗಳು ವ್ಯಕ್ತಿಯ ಆಯುಸ್ಸಿಗೆ ಅಥವಾ ವಯೋಮಾನಕ್ಕೆ ಸಂಬಂಧಿಸಿದುವಲ್ಲ, ಇವು ಪ್ರತಿಯೊಬ್ಬರಲ್ಲಿಯೂ ವಿವಿಧ ಪ್ರಮಾಣದಲ್ಲಿ ಇರುವಂಥವು. ಇತರರ, ವಿಶೇಷವಾಗಿ ತಂದೆ ತಾಯಿಯರ, ಮನೋಭಾವಗಳು, ಧೋರಣೆಗಳು, ವರ್ತನೆಗಳು ಇವುಗಳ ಮೂಲಕ ರೂಪಿತವಾದುದು ಪಿತೃ ಅಹಂ. ರೂಢಿಯಿಂದ ಬಂದ ಆಚರಣೆಗಳು, ನಂಬಿಕೆಗಳು, ಪೂರ್ವಗ್ರಹಗಳು ಮತ್ತು ಸಾಮಾಜಿಕ ರೀತಿನೀತಿಗಳಿಂದ ಪಡೆದ ವರ್ತನೆಗಳು ಇದರಲ್ಲಿ ಸೇರಿರುತ್ತವೆ. ಈ ಅಹಂ ಸಾಮಾನ್ಯವಾಗಿ ವಿಮರ್ಶಾತ್ಮಕ ನಿರ್ಣಯದ ರೂಪದಲ್ಲಿಯೂ ವಿವಿಧ ರೀತಿಯ ಮಾರ್ಗದರ್ಶನದ ರೂಪದಲ್ಲಿಯೂ ಕೆಲವೊಮ್ಮೆ ಪ್ರಸ್ತುತ ಸ್ಥಿತಿಯ ಬಗ್ಗೆ ಅಸಹನೆಯ ರೂಪದಲ್ಲಿಯೂ ವ್ಯಕ್ತವಾಗುತ್ತದೆ. ವಯಸ್ಕ ಅಹಂ ವಾಸ್ತವ ದೃಷ್ಟಿಕೋನದ ರೂಪದಲ್ಲಿ ವ್ಯಕ್ತವಾಗುತ್ತದೆ. ಇದು ವಿಷಯಗಳನ್ನು ತಿಳಿದುಕೊಳ್ಳುತ್ತದೆ, ಪ್ರಯೋಗ ನಡೆಸುತ್ತದೆ ಮತ್ತು ನಿಷ್ಪಕ್ಷಪಾತವಾಗಿ ವಿಷಯಗಳನ್ನು ಅಳೆಯುತ್ತದೆ. ಶಿಶು ಅಹಂ ಹುಟ್ಟರಿವುಗಳಿಂದ ಕೂಡಿರುತ್ತದೆ. ಕಾಮಕ್ರೋಧಾದಿ ಭಾವೋದ್ವೇಗಗಳಿಗೆ ವಶವಾಗುವ ಪ್ರವೃತ್ತಿ ಮತ್ತು ಸ್ವಾಭಾವಿಕವಾಗಿ ಹರ್ಷದಿಂದ ಕೂಡಿರುವ ಪ್ರವೃತ್ತಿ ಈ ಅಹಂಕಾರಕ್ಕೆ ಸಂಬಂಧಿಸಿದುದು. ಅಹಂನ ಈ ಮೂರು ಅವಸ್ಥೆಗಳು, ವಿವಿಧ ಅಂಶಗಳು ಸೇರಿ ನಮ್ಮ ವ್ಯಕ್ತಿತ್ವ ರೂಪಿತವಾಗಿದೆ ಎಂಬುದನ್ನು ಸೂಚಿಸುತ್ತವೆ. ಮೊದಲನೆಯ ಪಿತೃ-ಅಹಂ ನಾವು ಹೊರಗಿನಿಂದ ಪಡೆದುದು, ಎರಡನೆಯ ವಯಸ್ಕ-ಅಹಂ ನಾವು ಈಗ ನಮ್ಮ ಅನುಭವಗಳ ಮೂಲಕ ಪಡೆಯುವಂತಹುದು ಮತ್ತು ಮೂರನೆಯ ಶಿಶು-ಅಹಂ ನಾವು ಹುಟ್ಟುವಾಗಲೆ ಪಡೆದುಕೊಂಡು ಬಂದ ಆಸ್ತಿ—ಅದು ನಮ್ಮ ಪೂರ್ವಸಂಸ್ಕಾರಗಳ ಮೊತ್ತ.

ಇವಿಷ್ಟೂ ವ್ಯಕ್ತಿಯ ಮಾನಸಿಕ ಸ್ತರಕ್ಕೆ ಸೇರಿರುವುದೆಂಬುದು ಸ್ಪಷ್ಟ. ಹಿಂದೂಶಾಸ್ತ್ರದ ದೃಷ್ಟಿಯಿಂದ ಇದು ಮನೋಮಯ ಕೋಶಕ್ಕೆ ಸಂಬಂಧಿಸಿದುದು. ಆದರೆ ಈ ಮಾನಸಿಕ ವೃತ್ತಿಗಳನ್ನು ನಿಯಂತ್ರಿಸುವ ಇನ್ನೊಂದು ಅಂಶವಿದೆ. ಅದನ್ನೇ ನಾವು ಅಹಂಪ್ರತ್ಯಯವೆಂದು ಕರೆಯುವುದು.

> ಅಹಂಪ್ರತ್ಯಯವು ಆತ್ಮನಿಂದ ಉದ್ಭವಿಸಿ ಅದನ್ನೇ ಮರೆತು ಬಿಡುವುದನ್ನೇ ಜನನ ಎನ್ನಬಹುದು. ಆದ್ದರಿಂದ ವ್ಯಕ್ತಿಯ ಜನನ ತಾಯಿಯ ಮರಣ ಎನ್ನಬಹುದು.... ಪುನಃ ತಾಯಿಯನ್ನು ಪಡೆಯುವುದೆಂದರೆ ಅಹಂ ಪ್ರತ್ಯಯದ ಮರಣ.
>
> —*ಶ್ರೀರಮಣ ಮಹರ್ಷಿ*

ಈ ಅಹಂಪ್ರತ್ಯಯವು ಇತರ ಮನೋವೃತ್ತಿಗಳೊಡನೆ ಒಂದಾದಾಗ ಆ ವೃತ್ತಿಗಳಿಗನುಗುಣವಾಗಿ ಅದು ಬೇರೆ ಬೇರೆ ರೂಪವನ್ನು ಪಡೆಯುತ್ತದೆ—ಗೀತೆಯಲ್ಲಿ ಹೇಳಿರುವಂತೆ "ಬಹುಶಾಖೆಯುಳ್ಳದ್ದೂ ಅಸಂಖ್ಯವೂ ಆಗುತ್ತದೆ" (ಭಗವದ್‌ಗೀತೆ, ೨.೪೧). ಆಗ ವ್ಯಕ್ತಿ ಒಮ್ಮೊಮ್ಮೆ ಒಂದೊಂದು ರೀತಿ ಇರುತ್ತಾನೆ, ಅವನು ವಿವಿಧ ವ್ಯಕ್ತಿತ್ವಗಳನ್ನು ಪಡೆಯುತ್ತಾನೆ. ಅವನಿಗೆ ನಿರ್ದಿಷ್ಟವಾದ ಒಂದು ವ್ಯಕ್ತಿತ್ವವೇ ಇರುವುದಿಲ್ಲ. ಅಹಂಪ್ರತ್ಯಯವು ಬೆಳೆದು ಪ್ರಬುದ್ಧವಾದಾಗ ಇತರ ಮನೋವೃತ್ತಿಗಳನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳುತ್ತದೆ. ಆಗ ವ್ಯಕ್ತಿಯು ಸ್ವಕೇಂದ್ರಿತವಾದ ಒಂದು ನಿರ್ದಿಷ್ಟ ವ್ಯಕ್ತಿತ್ವವನ್ನು ಪಡೆಯುತ್ತಾನೆ.

## ತನ್ನನ್ನು ಕಳೆದುಕೊಳ್ಳುವುದು

ಹೀಗೆ ವ್ಯಕ್ತಿಯು ಮೊದಲು ತನ್ನಲ್ಲಿ ತಾನು ನೆಲೆ ನಿಂತು ಅಹಂಪ್ರತ್ಯಯವನ್ನು ಬೆಳಸಿಕೊಳ್ಳಬೇಕು. ಅನಂತರ ತನ್ನನ್ನು ಇತರರೊಡನೆಯೂ ಮುಂದೆ ಭಗವಂತನೊಡನೆಯೂ ಒಂದಾಗಿಸಿಕೊಂಡು, ಒಂದು ಹನಿಯು ಸಮುದ್ರದೊಡನೆ ಸೇರುವಂತೆ, ಅಹಂಪ್ರತ್ಯಯವನ್ನು ಪೂರ್ಣತೆಯಲ್ಲಿ ಲಯವಾಗಿಸಬೇಕು.

ಅನೇಕರಿಗೆ ಈ ಅಹಂಪ್ರತ್ಯಯವನ್ನು, ತಮ್ಮ ವೈಯಕ್ತಿಕತೆಯನ್ನು

ಕಳೆದುಕೊಳ್ಳುವುದಕ್ಕೆ ಭಯವಾಗಬಹುದು. ಪೂರ್ಣತೆಯ ಅರಿವು ಇಲ್ಲದಾಗ ಭಯಕ್ಕೆ ಅವಕಾಶವಿದೆ—ತನ್ನನ್ನು ತಾನು ಕಳೆದುಕೊಳ್ಳುವ ಭಯವಿರುತ್ತದೆ. ಆದರೆ ಪೂರ್ಣತೆಯ ಅರಿವು ಉಂಟಾದರೆ ಆ ಪೂರ್ಣತೆಯೊಂದಿಗೆ ಒಂದಾಗಲು ಮನಸ್ಸು ತವಕಿಸುತ್ತದೆ. ಏಕೆಂದರೆ ಅಂಶವು ಅಂಶಿಯಿಂದ ಪ್ರತ್ಯೇಕವಾಗಿರಲು ಬಯಸುವುದಿಲ್ಲ, ಅಂಶಿಯೊಡನಿರುವುದರಲ್ಲಿಯೇ ಅದರ ಸಾರ್ಥಕತೆ ಇರುವುದು. ಮತ್ತೆ ಅದು ತನ್ನನ್ನು ಕಳೆದುಕೊಳ್ಳುವ ಬದಲು ತಾನೇ ಪೂರ್ಣತೆಯನ್ನು ಪಡೆಯುತ್ತದೆ. ಒಂದು ಜೀವಕೋಶವು ಪೂರ್ಣದೇಹದೊಡನೆ ಅವಿಭಾಜ್ಯ ಸಂಬಂಧವನ್ನು ಪಡೆದಿರುವುದೇ ಅದರ ಸಾರ್ಥಕತೆ.

> ಒಂದು ತೊರೆಯು ಸಮುದ್ರದಲ್ಲಿ ಲಯಹೊಂದಿ ತಾನು ಸಮುದ್ರವೆಂದು ತಿಳಿಯುವುದರಿಂದ ಅದಕ್ಕೆ ಏನಾದರೂ ನಷ್ಟವಾಗುವುದೆ? ಮಾನವನು ಭಗವಂತನಲ್ಲಿ ತನ್ನನ್ನು ಕಳೆದುಕೊಳ್ಳುವುದೆಂದರೆ ತನ್ನ ಛಾಯೆಯನ್ನು ಕಳೆದುಕೊಂಡು ತನ್ನ ಅಸ್ತಿತ್ವದ ಛಾಯಾರಹಿತ ಸಾರವನ್ನು ಪಡೆದುಕೊಂಡಂತೆ.
>
> —*The Book of Mirdad,*

ಒಂದು ಉಪ್ಪಿನ ಗೊಂಬೆಯು ಸಮುದ್ರವನ್ನು ಅಳೆಯಲು ಹೋದರೆ ಅದು ಸಮುದ್ರದಲ್ಲಿ ಕರಗಿಹೋಗುವುದು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಹಾಗೆಯೇ ನಮ್ಮ ವ್ಯಕ್ತಿತ್ವ ಪೂರ್ಣದಲ್ಲಿ ಕರಗಿಹೋಗಬೇಕು. ಆ ಗೊಂಬೆಯು ಮರದ ಅಥವಾ ಕಲ್ಲಿನ ಗೊಂಬೆಯಾಗಿದ್ದರೆ ಸಮುದ್ರದಲ್ಲಿ ಕರಗುತ್ತಿರಲಿಲ್ಲ. ಹಾಗೆಯೇ ನಮ್ಮ ವ್ಯಕ್ತಿತ್ವವು ಭೌತಿಕ ವಿಷಯದಿಂದ ಕೂಡಿದ್ದರೆ ಅದು ಪೂರ್ಣದಲ್ಲಿ ಕರಗುವುದಿಲ್ಲ. ಅದನ್ನು ಆಧ್ಯಾತ್ಮಿಕಗೊಳಿಸಿದಾಗಲೇ ಅದು ಪೂರ್ಣತೆಯ ಸಾಗರವನ್ನು ಅಳೆಯಲು ಮುಂದಾಗುತ್ತದೆ ಮತ್ತು ಕೊನೆಗೆ ಅದರಲ್ಲೇ ಕರಗಿಹೋಗುತ್ತದೆ. ಉಪ್ಪಿನ ಗೊಂಬೆಗೆ ತನ್ನ ವ್ಯಕ್ತಿತ್ವದ ಪೂರ್ಣ ಅರಿವಿತ್ತು, ಪೂರ್ಣ ಅಹಂಪ್ರಜ್ಞೆಯೊಂದಿಗೆ "ನಾನು ಸಮುದ್ರವನ್ನು ಅಳೆಯುತ್ತೇನೆ" ಎಂದು ಹೊರಟಿತು. ಹಾಗೆಯೇ ನಾವು ಪೂರ್ಣ ವ್ಯಕ್ತಿತ್ವವನ್ನು ಪಡೆದಾಗಲೇ, ನಮ್ಮ ಅಹಂ ಪ್ರತ್ಯಯವು ಪೂರ್ಣವಿಕಾಸವನ್ನು ಪಡೆದಾಗಲೇ ಪೂರ್ಣದೊಡನೆ ಒಂದಾಗುವ ಆಕರ್ಷಣೆ ಉಂಟಾಗಿ ಅಂತ್ಯದಲ್ಲಿ ತನ್ನನ್ನು ತಾನು ಕಳೆದುಕೊಳ್ಳುವುದು.

### ವೈಜ್ಞಾನಿಕ ನಿಲುವು

ಮಾನವನು ತನ್ನನ್ನು ಅಧ್ಯಯನ ಮಾಡುವುದರ ಮೂಲಕ, ಮೊದಲು ವಿಷಯ ವಸ್ತುಗಳಲ್ಲಿ ಕಳೆದುಕೊಂಡಿದ್ದ ತನ್ನ ವ್ಯಕ್ತಿತ್ವವನ್ನು ಪಡೆಯುತ್ತಾನೆ, ತಾನೇ ತಾನಾಗುತ್ತಾನೆ, ಮತ್ತು ಅನಂತರ ಪೂರ್ಣದಲ್ಲಿ ತನ್ನನ್ನು ತಾನು ಕಳೆದುಕೊಂಡು ಪರಿಪೂರ್ಣವ್ಯಕ್ತಿತ್ವವನ್ನು ಪಡೆಯುತ್ತಾನೆ. ವಿಕಾಸದ ಹಾದಿಯಲ್ಲಿ ಅಹಂಕಾರದ ಇಂತಹ ಬೆಳವಣಿಗೆಯನ್ನು ಕುರಿತು ಎಚ್.ಜಿ.ವೆಲ್ಸ್, ಜಿ.ಪಿ. ವೆಲ್ಸ್ ಮತ್ತು ಜೂಲಿಯನ್ ಹಕ್ಸ್ಲೇ (*H.G & G. P. Wells, Julian Huxley*) ಹೀಗೆ ಬರೆಯುತ್ತಾರೆ (*The Science of Life*, ಪು. 879):

"ಹಿರಿಯದಾದ ಒಂದರಲ್ಲಿ ಭಾಗವಹಿಸಿ, ಅದರಲ್ಲಿ ತನ್ನನ್ನು ತಾನು ಕಂಡುಕೊಂಡು ಅದರಲ್ಲಿ ಐಕ್ಯವಾಗುವ ಮೂಲಕ ಅವನು(ವ್ಯಕ್ತಿಯು) ತನ್ನ ಅಹಂಕಾರದಿಂದ ತಪ್ಪಿಸಿಕೊಳ್ಳುವನು; ಆ ಒಗ್ಗೂಡುವಿಕೆಯಿಂದ ಅವನುಒಂದು ವ್ಯಕ್ತಿಸ್ವರೂಪರಹಿತ ಅಮೃತತ್ವವನ್ನು ಪಡೆಯುವನು; ಅವನ ಅನನ್ಯತೆ ಆ ಹಿರಿದಾದುದರ ಅನನ್ಯತೆಯಲ್ಲಿ ಒಂದಾಗಿ ಸೇರಿಹೋಗುವುದು. ಹೆಚ್ಚಿನ ಧಾರ್ಮಿಕ ಅನುಭಾವದ ಸಾರ ಇದೇ;ವೈಯಕ್ತಿಕತೆಯ ಜೀವಶಾಸ್ತ್ರೀಯ ವಿಶ್ಲೇಷಣೆ ನಮ್ಮನ್ನು ಅನುಭಾವಿಗಳ ಸಮೀಪಕ್ಕೆ ತಂದು ನಿಲ್ಲಿಸುವುದು ಮಾತ್ರ ಗಮನಾರ್ಹ. ಈ ಎರಡನೆಯ ಚಿಂತನಧಾರೆಯನ್ನಯ, ವ್ಯಕ್ತಿಯು ಕಳೆದುಕೊಳ್ಳುವ ಮೂಲಕ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಾನೆ. ಅನುಭಾವಿಗಳ ಬೋಧನೆಯ ಪ್ರಕಾರ ಅವನು ದೇವರಲ್ಲಿ ಐಕ್ಯನಾದರೆ, ಜೀವನದ ವೈಜ್ಞಾನಿಕ ಅರ್ಥವಿವರಣೆಯ ಪ್ರಕಾರ ತಾನು ವೆಂಕ, ಶೀನ, ನಾಣಿ ಎಂಬುದನ್ನು ಮರೆತು ತಾನು ಕೇವಲ ಮಾನವನೆಂಬುದನ್ನು ಆವಿಷ್ಕರಿಸಿಕೊಳ್ಳುತ್ತಾನೆ... ನವೀನ ವಿಜ್ಞಾನ ಮತ್ತು ಅನುದಿನದ ಪ್ರಾಯೋಗಿಕ ನೈತಿಕತೆಯ ಬೋಧನೆಗಳಲ್ಲಿ ಪಾಶ್ಚಾತ್ಯ ಅನುಭಾವಿ ಮತ್ತು ಪೌರ್ವಾತ್ಯ ಋಷಿ ಇಬ್ಬರೂ ಒಂದು ಬಲವಾದ ಅನುಮೋದನೆಯ ಪರಿಣಾಮವನ್ನು ಕಾಣುತ್ತಾರೆ; ಇಬ್ಬರೂ ಬೋಧಿಸುವುದು ಅಹಂಅನ್ನು ದಮನ ಮಾಡಬೇಕು ಎಂದು, ಅಹಂ ಎಂಬುದು ಕೇವಲ ಒಂದು ವಿಧಾನವಲ್ಲದೆ ಗುರಿಯಲ್ಲ ಎಂದು." (ಸ್ವಾಮಿ ರಂಗನಾಥಾನಂದರ "ಭಗವದ್ಗೀತೆಯ ವಿಶ್ವಸಂದೇಶ" ವೆಂಬ ಗ್ರಂಥದಲ್ಲಿ ಉದ್ಧೃತವಾದುದು.)

❖

## ಅಂತರಂಗದ ಬಟ್ಟಲು

ಜೆನ್ ಗುರುವಿನ ಹತ್ತಿರ ಭಕ್ತನೊಬ್ಬನು ಹೋಗಿ ತನಗೆ ಸತ್ಯದ ಬಗ್ಗೆ ತಿಳಿಸಿರೆಂದು ಕೇಳಿಕೊಂಡನು.
ಗುರುವು ಮೊದಲು ಚಹಾ ಕುಡಿ ಎಂದು ಅವನಿಗೆ ಹೇಳಿದನು.
ಶಿಷ್ಯನಿಗೆ ಬಟ್ಟಲನ್ನು ಕೊಟ್ಟು, ಗುರುವು ಪಾತ್ರೆಯಿಂದ ಬಟ್ಟಲಿಗೆ ಚಹಾ ಸುರಿಯತೊಡಗಿದನು.
ಬಟ್ಟಲು ತುಂಬಿ ತುಳುಕುತ್ತಿದ್ದರೂ ಸುರಿಯುವುದನ್ನು ನಿಲ್ಲಿಸಲಿಲ್ಲ. ಶಿಷ್ಯನು ಆಶ್ಚರ್ಯದಿಂದ, "ಬಟ್ಟಲು ತುಂಬಿದೆ, ಸುರಿಯುವುದನ್ನು ನಿಲ್ಲಿಸಿ, ಇನ್ನು ಅದಕ್ಕೆ ಚಹಾ ಹಿಡಿಯುವುದಿಲ್ಲ" ಎಂದನು.
ಗುರುವು ಹೇಳಿದ!
"ಹಾಗೆಯೇ ನಿನ್ನ ಅಂತರಂಗದ ಬಟ್ಟಲು ಅಹಂಕಾರದಿಂದ ತುಂಬಿದೆ. ಅಲ್ಲಿ ಸತ್ಯಕ್ಕೆ ಎಡೆಯೇ ಇಲ್ಲ."